MADAM SPEAKAR.— Sri B. V. Kakkilaya is permitted to put Sri M. S. Krishnan's Question.

FINANCIAL ASSISTANCE TO REMCO

191. Sri B. V. KAKKILAYA (Bantwal) [on behalf of—

Sri M. S. KRISHNAN (Malleswaram)].—

Will the Minister for Industries be pleased to state:—

(a) whether the Government is aware of the deteriorating situation in REMCO, Bangalore, due to paucity of finances to run the industry;

(b) whether the Government has been approached by the Management of REMCO for financial assistance; if so when and the extent of financial assistance asked for;

(c) whether the Government is aware that 1700 workers are threatened with unemployment due to the reported decision of the Management to lay off all workmen or close the factory;

(d) whether the Government is aware that the Public Undertakings Committee of the State Legislature has recommended that adequate financial help should be given to REMCO and put the industry on a firm footing;

(e) if so, the action the Government has taken in order to provide the financial assistance, so that lay off of workmen or closure of the factory is averted and the industry put on a firm footing;

(f) the reasons for delay in providing financial assistance to this public sector industry ?

Sri S. M. KRISHNA (Minister for Industries).—

(a) Yes.

(b) Yes. The Company has approached Government on 5th April 1973 for a loan of Rs. 100 lakhs. This figure has been revised to Rs. 80 lakhs in August 1973.

(c) No.

(d) Yes.

(e) and (f) The matter is under the active consideration of Government, in consultation with the state Bank of Mysore and the Management of REMCO.

ಶ್ರೀ ಬಿ. ವಿ. ಕಕ್ಕಿಲಾಯ.— ಇಲ್ಲಿ (ಸಿ) ಮತ್ತು (ಎಫ್) ಉತ್ತರದಲ್ಲಿ ಪರಿಶೀಲನೆ ಮಾಡಲಾಗುತ್ತಿದೆ ಎಂದು ಹೇಳಲಾಗಿದೆ. ಈ ಪರಿಶೀಲನೆಗೆ ಇನ್ನೂ ಎಷ್ಟು ಕಾಲ ಬೇಕಾಗುತ್ತದೆ?

†ಶ್ರೀ ಎಸ್. ಎಂ. ಕೃಷ್ಣ.— ಇದಕ್ಕೆ ಬೇಕಾಗುವ ಹಣದ ಪ್ರಮಾಣ ಬಹಳ ದೊಡ್ಡದು. ಸರಕಾರದವರು ಇದರಲ್ಲಿ ಸಾರ್ವಜನಿಕರ ಹಣವನ್ನು ತೊಡಗಿಸಬೇಕಾಗಿದ್ದರೆ ಇದು ಹೇಗೆ ಕೆಲಸಮಾಡುತ್ತಿದೆ ಎಂಬುದನ್ನು ಪರಿಶೀಲನೆ ಮಾಡಬೇಕು. ಆದರೆ ಸರಕಾರ ನೇರವಾಗಿ ಇದರಲ್ಲಿ ತನ್ನ ಹಣವನ್ನು ಹಾಕುವುದಕ್ಕಾಗುವದಿಲ್ಲ. ಆದುದರಿಂದ ಸರಕಾರ ಈ ವಿಚಾರದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಜೊತೆ ವಿಚಾರ ವಿನಿಮಯ ನಡೆಸುತ್ತಿದೆ. ಸ್ವಲ್ಪ ಕಾಲ ಬೇಕಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.— ಇಲ್ಲಿ ತಯಾರಾಗುವ ಟಿ. ವಿ. ಸೆಟ್ಟುಗಳನ್ನು ಮತ್ತು ಎನರ್ಜಿ ಮೀಟರುಗಳನ್ನು ಬಿಲ್ದಾರರವರಿಗೆ ಮಾರಾಟ ಮಾಡಬೇಕೆಂಬ ಸೂಚನೆಗಳೇನಾದರೂ ಸರ್ಕಾರಕ್ಕೆ ಬಂದಿದೆಯೇ?

ಶ್ರೀ ಎಸ್. ಎಂ. ಕೃಷ್ಣ.— ಅಂಥ ಯಾವ ಸೂಚನೆಗಳೂ ಯಾರಿಂದಲೂ ಬಂದಿಲ್ಲ.

ಶ್ರೀ ಕೆ. ಶ್ರೀರಾಮುಲು.— ಒಂದು ಕೋಟಿ ರೂಪಾಯಿ ಸಾಲ ಕೇಳಿದಾರೆಂದು ಆಗಲೆ ತಿಳಿಸೋಣವಾಯಿತು. ಮೊದಲು ಆ ಕಾರ್ಖಾನೆಗೆ ಎಷ್ಟು ಮೂಲ ಧನವನ್ನು ಹಾಕಲಾಗಿತ್ತು? ಅವರು ಅಲ್ಲಿ ನಷ್ಟವಾಗುವುದಕ್ಕೇನು ಕಾರಣಗಳನ್ನು ಕೊಟ್ಟಿದ್ದಾರೆ? ಅಡ್ಮಿನಿಸ್ಟ್ರೇಷನ್ ಬಾಬಿಗೆ ಹೆಚ್ಚು ಹಣ ಖರ್ಚಾಗಿ ಉತ್ಪತ್ತಿಯಲ್ಲಿ ಕಡಿಮೆ ಬರುತ್ತಿರುವುದು ಕಾರಣವೇ ಅಥವಾ ಇನ್ನೇನು ಕಾರಣ ಎಂಬುದನ್ನು ತಿಳಿಸುವುದಕ್ಕೆ ಸಾಧ್ಯವೇ?

ಶ್ರೀ ಎಸ್. ಎಂ. ಕೃಷ್ಣ — ಈ ಕಾರ್ಖಾನೆಗೆ ನಾನಾ ವಿಧವಾದ ದೋಷ, ಕೊರತೆ ಮತ್ತು ತೊಂದರೆಗಳಿರುತ್ತವೆ. ೧೯೬೨–೬೩ ರಲ್ಲಿ ಈ ಕಾರ್ಖಾನೆಯ ವೇಜ್ ಬಿಲ್ ೨೪ ಲಕ್ಷ ರೂಪಾಯಿ ಇದ್ದುದು ಅದು ೧೯೭೧–೭೨ಕ್ಕೆ ೭೮ ಲಕ್ಷಕ್ಕೇರಿದೆ. ಅಲ್ಲಿ ೧೭೨೨ ಜನರು ಕೆಲಸಗಾರರಿದ್ದಾರೆ. ಅವರ ಜೊತೆಗೆ ೭೮ ಜನರು ಸೂಪರ್‌ವೈಜರುಗಳಿದ್ದಾರೆ. ಖಾಸಗೀ ಕಂಪನಿಯಲ್ಲಿ ಹೀಗೆ ೭೮ ಜನರು ಸೂಪರ್‌ವೈಜರುಗಳು ಇರಬೇಕಾಗಿದ್ದರೆ ಅಲ್ಲಿ ಒಬ್ಬೊಬ್ಬರ ಕೈಕೆಳಗೂ ೩೦–೪೦ ಜನರು ಕೆಲಸಗಾರರಿರಬೇಕು. ಆದರೆ ಅಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ರೆಕ್ರೂಟ್‌ಮೆಂಟ್ ಭಾರವು ಆ ಶರಾವತಿಯಲ್ಲಿ ಪ್ರವಾಹ ಹೇಗೆ ಏರುತ್ತದೋ ಹಾಗೆ ಇಲ್ಲಿ ಕಾರ್ಮಿಕರ ಸಂಖ್ಯೆ ಏರಿರುತ್ತದೆ. ಅಲ್ಲಿ ಅಷ್ಟೂ ಜನರಿಗೆ ಉದ್ಯೋಗ ಕೊಡಲು ಸಾಧ್ಯವಾಗುತ್ತಿಲ್ಲ. ಕೇಂದ್ರ

ಸರ್ಕಾರದವರು ನಮಗೆ ೫೦೦೦ ಟಿಲ್ಲಿಜನ್ ಸೆಟ್ಟುಗಳನ್ನು ಮಾತ್ರ ಮಾಡಲು ಲೈಸೆನ್ಸ್ ಕೊಟ್ಟಿದ್ದಾರಾದ್ದರಿಂದ ಇಲ್ಲಿ ಫ್ಯಾಕ್ಟರಿಯವರು ಇನ್ನುಳಿದುದನ್ನು ರೇಡಿಯೋಗಳನ್ನು ಮಾಡುವುದಕ್ಕೆ ಪರಿಶೀಲನೆ ಮಾಡುತ್ತಿದ್ದಾರೆ. ಆದರೆ ಈ ಮಂಡಳಿಯವರು ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಅವರು ಹಣ ಕೊಡತಕ್ಕ ಬಗ್ಗೆ ಮೈಸೂರು ಬ್ಯಾಂಕಿನವರೇನು ಕೆಲವು ಷರತ್ತುಗಳನ್ನು ಹಾಕಿದ್ದಾರೋ ಅವುಗಳನ್ನು ಇವರು ಅಂಗೀಕರಿಸಿದ್ದಾರೆ. ನಾನು ಈಗಾಗಲೆ ನಮ್ಮ ಸರ್ಕಾರದ ಹಣಕಾಸಿನ ಮಾನ್ಯ ಸಚಿವರನ್ನು ಕಂಡು ಮೈಸೂರು ಬ್ಯಾಂಕಿನವರು ಆ ಹಣವನ್ನು ಕೊಡತಕ್ಕ ವಿಚಾರದಲ್ಲಿ ಗ್ಯಾರಂಟಿ ಕೊಡಬೇಕೆಂದು ಪ್ರಾರ್ಥಿಸಿಕೊಂಡಿದ್ದೇನೆ. ಈ ಬಗ್ಗೆ ಪರಿಶೀಲನೆಗಳು ನಡೆಯುತ್ತಿವೆ.

ಶ್ರೀ ಬಿ. ವಿ. ಕಕ್ಕಿಲಾಯ.— ಮಾನ್ಯ ಸಚಿವರು ಅಲ್ಲಿ ೧೭೦೦ ಜನರಿಗೂ ಹೆಚ್ಚು ಜನರು ಅಲ್ಲಿ ಕೆಲಸ ಮಾಡುತ್ತಾರೆಂದು ಹೇಳಿದರು. ಆದರೆ ಅವರಿಗೆ ಕೆಲಸ ಕೊಡುವುದಕ್ಕೇ ಬಹಳ ತೊಂದರೆ ಆಗಿದೆ ಅಂದಾಗ ಆ ಕಾರ್ಮಿಕರನ್ನು ಕೆಲಸದಿಂದ ತೆಗೆಯದಂತೆ ಅಲ್ಲೇ ಉಳಿಸಲು ಭರವಸೆ ಕೊಡುತ್ತೀರಾ ?

ಶ್ರೀ ಎಸ್. ಎಂ ಕೃಷ್ಣ.— ನಾನು ಈ ವಿಚಾರದಲ್ಲಿ ಮಾನ್ಯ ಸದಸ್ಯರಿಂದ ಯಾಚನೆಯನ್ನು ಪ್ರಾರ್ಥಿಸುತ್ತಿದ್ದೇನೆ. ಈ ಕಾರ್ಖಾನೆಯ ನಷ್ಟ ೧೯೭೩–೭೪ಕ್ಕೆ ೯೦ ಲಕ್ಷ ಇದ್ದು, ೧೯೭೪–೭೪ಕ್ಕೆ ಇನ್ನೂ ಹೆಚ್ಚಾಗುವ ನಿರೀಕ್ಷಣೆ ಇದೆ. ಇದು ಒಂದು ಕೋಟಿ ರೂಪಾಯಿಗೇರಬಹುದೆಂದು ಅಂದಾಜು ಮಾಡಲಾಗಿದೆ. ಆದುದರಿಂದ ಇದನ್ನು ಹೇಗೆ ಮುಂದುವರಿಸಬೇಕೆಂಬ ವಿಚಾರದಲ್ಲಿ ಸರ್ಕಾರಕ್ಕೆ ಬಹಳ ಕಳವಳವುಂಟಾಗಿದೆ. ಇದರ ನಷ್ಟವನ್ನು ಭರಿಸುವುದಕ್ಕೆ ಬಹಳ ಕಷ್ಟವಾಗಿದೆ. ಹಿಂದೆ ಒಂದಾವರ್ತಿ ಸಕ್ಕರೆ ಕಾರ್ಖಾನೆಯಲ್ಲಿ ಸಹಾ ಇದೇ ತೊಂದರೆ ಉಂಟಾಗಿದ್ದಾಗ ಅಲ್ಲಿ ಕೆಲಸ ಮಾಡುತ್ತಿದ್ದ ೩೦೦೦ ಜನರಲ್ಲಿ ೧೬೦೦ ಜನರು ತಾವಾಗೇ ಮುಂದೆ ಬಂದು ವಾಲಂಟಿಯರಾಗಿ ನಿವೃತ್ತಿ ಹೊಂದುವುದಕ್ಕೆ ಅವರ ಅಭಿಲಾಷೆಯನ್ನು ವ್ಯಕ್ತಪಡಿಸಿ ಅಲ್ಲಿಯ ಕೆಲಸಗಳಿಗೆ ಒಂದು ಅನುವನ್ನು ಮಾಡಿಕೊಟ್ಟರು. ಅದರಂತೆ ಇಲ್ಲಿಯೂ ಕೂಡ ಕೆಲಸಗಾರರ ಸಂಖ್ಯೆಯನ್ನು ತಗ್ಗಿಸಿ ಇದನ್ನು ಒಂದು ಭದ್ರವಾದ ತಳಹದಿಯ ಮೇಲೆ ನಿಲ್ಲುವಂತೆ ಮಾಡತಕ್ಕ ಆಲೋಚನೆಗಳು ನಡೆಯುತ್ತಿವೆ. ಅದರಲ್ಲಿ ಈ ವಾಲಂಟಿಯರಾಗಿ ಕೆಲವರನ್ನು ನಿವೃತ್ತಿ ಮಾಡಬೇಕೆಂಬ ಆಲೋಚನೆಯೂ ಕೂಡ ಒಂದಾಗಿದೆ.

1–30 P.M.

VILLAGES ELECTRIFIED IN SHAHAPUR AND SHORAPUR TALUKS

246. Sri BAPU GOWDA RAYAPPA (Shahapur).—Will the Minister for Public Works and Electricity be pleased to state: